ಕನ್ನಡಪ್ರಭ

**Published in Kannada Prabha News Paper**
**dated: 30/06/2018**

# ತ್ಯಾಜ್ಯ ವಸ್ತುಗಳಿಂದ ಉದ್ಯಾನ ನಿರ್ಮಾಣ

**ಬೆಂಗಳೂರು**: ಗೋಪಾಲನ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಕಾಲೇಜಿನ ವಿದ್ಯಾರ್ಥಿಗಳು ಇಂದಿರಾನಗರದ ಸರ್ ಸಿ.ವಿ.ರಾಮನ್ ಜನರಲ್ ಆಸ್ಪತ್ರೆಯಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ತ್ಯಾಜ್ಯ ವಸ್ತುಗಳನ್ನು ಬಳಸಿ ಉದ್ಯಾನ ನಿರ್ಮಿಸಿ ಗಮನ ಸೆಳೆದ್ದಿದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಲೇಜಿನ ಡೀನ್ ಪ್ರೊ. ಕೆ.ವಿ.ಕೃಷ್ಣಮೂರ್ತಿ, ಆಸ್ಪತ್ರೆಯ ಆವರಣದಲ್ಲಿ ವ್ಯರ್ಥವಾದ ಸ್ಥಳವನ್ನು ಸಾರ್ವಜನಿಕರ ಉಪಯೋಗಕ್ಕೆ ಬರುವಂತೆ ವಿದ್ಯಾರ್ಥಿಗಳು ಮಾಡಿದ್ದಾರೆ. ದುಬಾರಿ ವಸ್ತುಗಳಿಗೆ ಹಣ ವ್ಯರ್ಥ ಮಾಡುವ ಬದಲಿಗೆ ಬಳಸಿ ಬಿಸಾಡಿದ ಟೈರ್‌ಗಳು, ಬಾಟಲಿ, ಹಗ್ಗಗಳು, ಸೈಕಲ್ ರಿಮ್ ಮತ್ತಿತರೆ ವಸ್ತುಗಳನ್ನು ಸಂಗ್ರಹಿಸಿ ಆಸನ ವ್ಯವಸ್ಥೆ ಕಲ್ಪಿಸುವ ಜತೆಗೆ ಮಿನಿ ಉದ್ಯಾನವನ್ನಾಗಿ ರೂಪಿಸಿದ್ದಾರೆ. ಈ ಮೂಲಕ ತ್ಯಾಜ್ಯ ಉತ್ಪನ್ನಗಳ ಮರುಬಳಕೆಯ ಮರು ವಿನ್ಯಾಸವನ್ನು ಪರಿಚಯಿಸಿದ್ದಾರೆ ಎಂದರು. ಇದಕ್ಕೂ ಮೊದಲು ಆಸ್ಪತ್ರೆಗೆ ಬರುವ ರೋಗಿಗಳು ಆಸ್ಪತ್ರೆಯ ಮೆಟ್ಟಿಲುಗಳು ಅಥವಾ ಹೊರಗಡೆ ಕುಳಿತುಕೊಳ್ಳಬೇಕಿತ್ತು. ಇದನ್ನು ಗಮನಿಸಿದ ವಿದ್ಯಾರ್ಥಿಗಳು ನರೇಂದ್ರ, ಪಿ.ರೆಡ್ಡಿ ಮತ್ತು ಜೆನಿಷಾ ಅವರ ನೇತೃತ್ವದಲ್ಲಿ ಇಡೀ ಪ್ರದೇಶವನ್ನು ಸ್ವಚ್ಛಗೊಳಿಸಿ ಕಾಲುದಾರಿ, ಸಣ್ಣ ಕೊಳ ಹಾಗೂ ಮಕ್ಕಳಿಗೆ ಆಟದ ಪ್ರದೇಶವಾಗಿ ಪರಿವರ್ತಿಸಿದ್ದಾರೆ ಎಂದು ತಿಳಿಸಿದರು. ಈ ವೇಳೆ ಪ್ರಾಂಶುಪಾಲ ಡಾ.ಎಸ್.ಸತೀಶ್, ಪ್ರೊ.ಸಿಂಧು, ವಿದ್ಯಾರ್ಥಿಗಳು ಇದ್ದರು.